**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 3081/2024**

**ಫಿರ್ಯಾದುದಾರರು** ದಿ. ಜನತಾ ಕೋ-ಅಪರೇಟಿವ್ ಕ್ರೆಡಿಟ್ ಸೊಸೈಟಿ, ಲಿಮಿಟೆಡ್,
ಭಟ್ಕಳ, ಮುಖ್ಯ ಶಾಖೆ ಪ್ರತಿನಿಧಿಸುವವರು, ಇದರ ಶಾಖಾ ವ್ಯವಸ್ಥಾಪಕರು,
ಶ್ರೀ ವಿನೋದ ತಂದೆಃ ಮಂಜುನಾಥ ನಾಯ್ಕ ,

**– ವಿರುದ್ಧ –**

**ಆರೋಪಿತರು** ಶ್ರೀ ಅಬ್ಬಾಸ್ ಅಮೀರ್ ಶೇಖ್,
ವಯಸ್ಸುಃ 60 ವರ್ಷ
ಸಾಃ ಹುಲಮಕ್ಕಿ, ಹೊನ್ನಿಗದ್ದೆ, ಹೆಬಳೆ,
ಭಟ್ಕಳ ತಾಲೂಕು.

**ಆಪಾದನೆ**

ಶ್ರೀ ಅಬ್ದುರ್ ರಶೀದ್ ತಂದೆಃ ಮೊಹಮ್ಮದ್ ಅಬ್ಬಾಸ್ ಅಮೀರ್ ಶೇಕ್ ರವರು ದಿನಾಂಕಃ 18-04-2022 ರಂದು ಪಿರ್ಯಾದಿ ಸಂಸ್ಥೆಯಲ್ಲಿ ರೂ.1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಹಣವನ್ನು ಕ್ಯಾಶ್ ಕ್ರೆಡಿಟ್ ಸಾಲವಾಗಿ ಸಾಲದ ಖಾತೆ ಸಂಖ್ಯೆ: ಸಿ.ಸಿ-1343 ರಲ್ಲಿ ಪಡೆದುಕೊಂಡಿದ್ದು, ಸದ್ರಿ ಸಾಲಕ್ಕೆ ಆರೋಪಿಯಾದ ನೀವು ಜಾಮೀನುದಾರರಾಗಿರುತ್ತೀರಿ. ಸದ್ರಿ ಸಾಲಕ್ಕೆ ಸಂಬಂಧಪಟ್ಟಂತೆ ಕೆಲವು ಕಾಗದ ಪತ್ರಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ಆದರೆ ಸದ್ರಿ ಸಾಲವನ್ನು ನಿಗದಿತ ಅವಧಿಯಲ್ಲಿ ಪಿರ್ಯಾದಿ ಸಂಸ್ಥೆಗೆ ಮರುಪಾವತಿ ಮಾಡಿದ್ದು ಇರುವುದಿಲ್ಲ. ನಂತರ ಪಿರ್ಯಾದಿ ಸಂಸ್ಥೆಯವರು ಸದ್ರಿ ಸಾಲ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಕೇಳಿಕೊಂಡಾಗ, ಸದ್ರಿ ಸಾಲದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನೀವು ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಭಟ್ಕಳ ಶಾಖೆಯ ಚೆಕ್ ನಂಬರ್ 887241 ನ್ನು ರೂ. 1,22,500/-( ರೂಪಾಯಿ ಒಂದು ಲಕ್ಷದ ಇಪ್ಪತ್ತೆರೆಡು ಸಾವಿರದ ಐದು ನೂರು ಮಾತ್ರ) ಕ್ಕೆ ದಿನಾಂಕಃ 16-10-2024 ಎಂದು ನಮೂದಿಸಿ ಚೆಕ್ ನ್ನು ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ದಿ. ಭಟ್ಕಳ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್, ಭಟ್ಕಳ ಮುಖ್ಯ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 18-10-2024 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 13-11-2024 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಮಗೆ ಕಳುಹಿಸಿದ್ದು, ಸದ್ರಿ ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೋಟಿಸು ತಲುಪಿದ 15 ದಿನಗಳೊಳಗೆ ಮರು ಮಾಡುವಂತೆ ತಿಳಿಸಿದ್ದು, ಸದ್ರಿ ನೋಟಿಸ್ಸು ನಿಮಗೆ ದಿನಾಂಕಃ 16-11-2024 ರಂದು ಜ್ಯಾರಿಯಾಗಿರುತ್ತದೆ. ಆದರೆ ಇಂದಿನವರೆಗೂ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು. ಚೆಕ್ಕು ನೀಡಿಲ್ಲ.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ಸಹಿ ಇದೆ**/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 17-07-2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.